# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ ಭಾಗ – 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಮಂಗಳವಾರ, 2ನೇ ಸೆಪ್ಟೆಂಬರ್ 2025

*****

ಸಂಖ್ಯೆ : 36

ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಶ್ರೀ ಪುಟ್ಟಣ್ಣ ಅವರು 155ನೇ ಅಧಿವೇಶನದಲ್ಲಿ ದಿನಾಂಕ:19.03.2025ರಂದು ನಿಯಮ 330ರ ಅಡಿ ಪ್ರಾಥಮಿಕ ಶಾಲೆಯಿಂದ ಪ್ರೌಢ ಶಾಲೆಗೆ, ಪ್ರೌಢ ಶಾಲೆಯಿಂದ ಪದವಿ ಪೂರ್ವ ಕಾಲೇಜುಗಳಿಗೆ ಪದೋನ್ನತಿ ಹೊಂದಿದ ಶಿಕ್ಷಕರುಗಳು ಹಾಗೂ 10, 15, 20, 25 ಮತ್ತು 30 ವರ್ಷಗಳ ಕಾಲಬದ್ಧ ವೇತನ ಮುಂಬಡ್ತಿ ಸೌಲಭ್ಯಗಳನ್ನು ಪಡೆದಿರುವ ಶಿಕ್ಷಕರುಗಳ ನಡುವಿನ ವೇತನ ತಾರತಮ್ಯವನ್ನು ಸರಿಪಡಿಸುವ ಕುರಿತು ಚರ್ಚಿಸಿದ್ದು, ಸದರಿ ವೇತನ ತಾರತಮ್ಯವನ್ನು ಸರಿಪಡಿಸುವ ಸಂಬಂಧ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 242(ಎ)ರೀತ್ಯಾ ಮಾನ್ಯ ಶಾಸಕರಾದ ಶ್ರೀ ಪುಟ್ಟಣ್ಣ ಅವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಮಾನ್ಯ ಶಾಸಕರುಗಳನ್ನೊಳಗೊಂಡಂತೆ ವಿಶೇಷ ಸದನ ಸಮಿತಿಯನ್ನು ರಚಿಸಲಾಗಿರುತ್ತದೆ. ಸಮಿತಿಯು ಮೂರು ತಿಂಗಳ ಅವಧಿಯೊಳಗೆ ವರದಿನ್ನು ಸಲ್ಲಿಸುವುದು.

ಶ್ರೀಯುತರುಗಳಾದ:

1. ಶಶಿಲ್ ಜಿ ನಮೋಶಿ
2. ಎಸ್.ವ್ಹಿ. ಸಂಕನೂರ
3. ನಿರಾಣಿ ಹಣಮಂತ ರುದ್ರಪ್ಪ
4. ಎಸ್.ಎಲ್. ಭೋಜೇಗೌಡ
5. ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್)

**ಪರಿಶೀಲನಾಂಶ**

ಪ್ರಾಥಮಿಕ ಶಾಲಾ ಶಿಕ್ಷಕ ಹುದ್ದೆಯಿಂದ ವಿದ್ಯಾರ್ಹತೆ ಮತ್ತು ಸೇವಾ ಜೇಷ್ಠತೆಯ ಅನ್ವಯ ಪ್ರೌಢ ಶಾಲಾ ಶಿಕ್ಷಕರ ಹುದ್ದೆಗೆ ಪದೋನ್ನತಿ ಪಡೆದ ಪ್ರೌಢ ಶಾಲಾ ಶಿಕ್ಷಕರು ಹಾಗೂ ಪ್ರೌಢ ಶಾಲಾ ಶಿಕ್ಷಕರ ಹುದ್ದೆಯಿಂದ ವಿದ್ಯಾರ್ಹತೆ ಮತ್ತು ಸೇವಾ ಜೇಷ್ಠತೆಯ ಅನ್ವಯ ಪದವಿ ಪೂರ್ವ ಶಿಕ್ಷಣ ಕಾಲೇಜುಗಳ ಉಪನ್ಯಾಸಕರ ಹುದ್ದೆಗೆ ಪದೋನ್ನತಿ ಪಡೆದ ಉಪನ್ಯಾಸಕರುಗಳಿಗೆ ಪದೋನ್ನತಿ ಪಡೆದಿರುವ ಒಂದೇ ಕಾರಣದಿಂದಾಗಿ ಸರ್ಕಾರಿ ಆದೇಶಗಳ ಅನ್ವಯ 10, 15, 20, 25 ಮತ್ತು 30 ವರ್ಷಗಳ ಕಾಲಬದ್ಧ ವೇತನ ಮುಂಬಡ್ತಿ ಪಡೆಯಲು ಅವಕಾಶ ನೀಡುತ್ತಿಲ್ಲದ ಕಾರಣ ಶಿಕ್ಷಕರುಗಳ ನಡುವೆ ಉಂಟಾಗಿರುವ ವೇತನ ತಾರತಮ್ಯದ ಸಮಸ್ಯೆಯ ಪರಿಹಾರಕ್ಕಾಗಿ ಮಾರ್ಗೋಪಾಯಗಳನ್ನು ಸೂಚಿಸಿ ವರದಿಯನ್ನು ಸಲ್ಲಿಸಲು ವಿಶೇಷ ಸದನ ಸಮಿತಿಯನ್ನು ರಚಿಸಲಾಗಿರುತ್ತದೆ.

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ

ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ

*http://kla.kar.nic.in/council/council.htm*